## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2018-19 ನೇ ಸಾಲಿನಲ್ಲಿ ವೈದ್ಯಕೀಯ & ದಂತ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸಿಗೆ ಪ್ರವೇಶಾತಿ ಪಡೆದು ಸೀಟನ್ನು ಹಿಂದಿರುಗಿಸುವ ವೈದ್ಯರುಗಳಿಂದ ಪಡೆಯಬೇಕಾದ ದಂಡದ ಬಗ್ಗೆ.

---***---

**ಓದಲಾಗಿದೆ:**

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ದಿ: 29-05-2018 ರ ಪತ್ರ ಸಂಖ್ಯೆ: ಡಿಎಂಇ/ಪಿಜಿಎಸ್/15/2018-19.

**ಪ್ರಸ್ತಾವನೆ:**

ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿನ ಸರ್ಕಾರಿ ಸೀಟುಗಳಿಗೆ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಸ್ನಾತಕೋತ್ತರ ವೈದ್ಯಕೀಯ & ದಂತ ವೈದ್ಯಕೀಯ ಕೋರ್ಸಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಈ ಕೆಳಕಂಡ ಬಾಂಡ್‌ಗಳನ್ನು ಸಲ್ಲಿಸಬೇಕಾಗಿರುತ್ತದೆ:

1) The Karnataka Conduct of Entrance Test for Selection and Admission to Post Graduate Medical and Dental Degree and Diploma Courses Rules, 2006 ರಲ್ಲಿ ನಿಗದಿಪಡಿಸಿರುವಂತೆ ರೂ. 50.00 ಲಕ್ಷಗಳ ಬಾಂಡ್.
2) THE KARNATAKA COMPULSORY SERVICE BY CANDIDATES COMPLETED MEDICAL COURSES ACT, 2012 ರಲ್ಲಿ ನಿಗದಿಪಡಿಸಿರುವಂತೆ ರೂ. 15.00 ರಿಂದ 30.00 ಲಕ್ಷಗಳ ಬಾಂಡ್.

ಈ ಬಗ್ಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕೈಪಿಡಿಯಲ್ಲಿಯೂ ಸಹ ಸದರಿ ಮಾಹಿತಿಯನ್ನು ಪ್ರಚುರಪಡಿಸಲಾಗಿದೆ. ಅದರನ್ವಯ ವಿದ್ಯಾರ್ಥಿಗಳು ಪ್ರವೇಶಾತಿಯ ಸಂದರ್ಭದಲ್ಲಿ ಮುಚ್ಚಳಿಕೆಯನ್ನು ಬರೆದು ಕೊಟ್ಟಿರುತ್ತಾರೆ. ಆದರೆ ಕೌನ್ಸಿಲಿಂಗ್ ಪ್ರಕ್ರಿಯೆ ಮುಗಿದ ನಂತರ ಹಂಚಿಕೆಯಾದ ಸೀಟುಗಳನ್ನು ಅಧ್ಯರ್ಪಿಸಲು ಇಚ್ಚಿಸಿರುವ ಕೆಲವು ವಿದ್ಯಾರ್ಥಿಗಳು ಮೂಲ ದಾಖಲಾತಿಗಳನ್ನು ಹಿಂದಿರುಗಿಸುವಂತೆ ಮಾನ್ಯ ನ್ಯಾಯಾಲಯದ ಮೊರೆ ಹೋಗಿರುತ್ತಾರೆ. ಈ ವಿದ್ಯಾರ್ಥಿಗಳು ಸೀಟುಗಳನ್ನು ಬ್ಲಾಕ್ ಮಾಡುವ ಮೂಲಕ ಇತರೆ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸೀಟು ದೊರೆಯಬಹುದಾದ ಅವಕಾಶದಿಂದ ವಂಚಿತರನ್ನಾಗಿ ಮಾಡಿರುತ್ತಾರೆ. ಅದಲ್ಲದೇ ಅವರು ಸಂಬಂಧಪಟ್ಟ ಕಾಲೇಜುಗಳಲ್ಲಿ ಒಂದು ತಿಂಗಳು ವ್ಯಾಸಂಗ ಪೂರೈಸಿರುತ್ತಾರೆ. ಆದರೆ ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ನ್ಯಾಯಾಲಯ ನೀಡಿರುವ ಆದೇಶಗಳನ್ನು ಪಾಲಿಸಬೇಕಾಗಿರುವುದರಿಂದ ಮತ್ತು ಸದರಿ ಬಾಂಡ್‌ಗಳಲ್ಲಿನ ಷರತ್ತುಗಳನ್ವಯ ಕ್ರಮವಹಿಸಬೇಕಾಗಿರುವುದರಿಂದ ಇಂತಹ ನಿರ್ದಿಷ್ಟ ಪ್ರಕರಣಗಳಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಹಾಗೂ ವಿದ್ಯಾರ್ಥಿಗಳಿಂದ ಪಡೆಯಬೇಕಾದ ದಂಡದ ಮೊತ್ತದ ಬಗ್ಗೆ ವೈದ್ಯಕೀಯ ಶಿಕ್ಷಣ ನಿರ್ದೇಶಕರು ಮೇಲೆ ಓದಲಾದ ಪತ್ರದಲ್ಲಿ ಸ್ಪಷ್ಟೀಕರಣ ಕೋರಿರುತ್ತಾರೆ.

ಆದ್ದರಿಂದ ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ್ದು, ರಾಜ್ಯದ ಸ್ನಾತಕೋತ್ತರ ವೈದ್ಯಕೀಯ & ದಂತ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸಿಗೆ ಪ್ರವೇಶ ಪಡೆದ ಕೆಲವು ವಿದ್ಯಾರ್ಥಿಗಳು ಕೌನ್ಸಿಲಿಂಗ್ ಪ್ರಕ್ರಿಯೆ

ಮುಗಿದ ನಂತರ ಹಂಚಿಕೆಯಾದ ಸೀಟುಗಳನ್ನು ಆದ್ಯರ್ಪಿಸಲು ಸಲ್ಲಿಸುವ ಕೋರಿಕೆಯನ್ನು ಸಾಮಾನ್ಯವಾಗಿ ಪುರಸ್ಕರಿಸಬಾರದು. ಆದರೆ, ವಿದ್ಯಾರ್ಥಿಗಳ ಮೂಲ ದಾಖಲಾತಿಗಳನ್ನು ಹಿಂದಿರುಗಿಸಲು ಕಾಲೇಜುಗಳಿಗೆ ಮಾನ್ಯ ನ್ಯಾಯಾಲಯಗಳಿಂದ ನಿರ್ದಿಷ್ಟ ಆದೇಶಗಳಿರುವ ಪ್ರಕರಣಗಳಲ್ಲಿ ಗ್ರಾಮೀಣ ಸೇವಾ ಬಾಂಡ್‌ನಲ್ಲಿ ನಿಗದಿಪಡಿಸಿರುವಂತೆ ರೂ. 15.00 ರಿಂದ 30.00 ಲಕ್ಷಗಳನ್ನು ಹಾಗೂ 03 ವರ್ಷಗಳ ಬಾಂಡ್‌ನಲ್ಲಿ ನಿಗದಿಪಡಿಸಿರುವಂತೆ ರೂ. 50.00 ಲಕ್ಷಗಳನ್ನು ಪಡೆಯುವ ಬದಲಿಗೆ 2018–19 ನೇ ಸಾಲಿನ ಸ್ನಾತಕೋತ್ತರ ವೈದ್ಯಕೀಯ & ದಂತ ವೈದ್ಯಕೀಯ ಕೋರ್ಸಿಗೆ ಪ್ರವೇಶ ಪಡೆದು ಕೌನ್ಸಿಲಿಂಗ್ ಪ್ರಕ್ರಿಯೆ ಮುಗಿದ ನಂತರ ಹಂಚಿಕೆಯಾದ ಸೀಟುಗಳನ್ನು ಆದ್ಯರ್ಪಿಸಿ, ವ್ಯಾಸಂಗದ ಮಧ್ಯದಲ್ಲಿ ಬಿಟ್ಟು ಹೋದ ಎಲ್ಲಾ ಪ್ರಕರಣಗಳಲ್ಲಿ ವಿದ್ಯಾರ್ಥಿಗಳಿಗೆ The Karnataka Conduct of Entrance Test for Selection and Admission to Post Graduate Medical and Dental Degree and Diploma Courses Rules, 2006 ರ ನಿಯಮ 15 (2) ರಲ್ಲಿ ನಿಗದಿಪಡಿಸಿರುವ ರೂ. 5.00 ಲಕ್ಷ ಹಾಗೂ ಪಡೆದಿರುವ ಶಿಷ್ಯವೇತನದ ಜೊತೆಗೆ ಪ್ರತಿ ಬಂಧಪತ್ರ/ಮುಚ್ಚಳಿಕೆ ಮುರಿಯುವ ದರವಾಗಿ ರೂ. 5.00 ಲಕ್ಷಗಳನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶವನ್ನು ಹೊರಡಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಆಕುಕ 167 ಆರ್‌ಜಿಯು 2018, ಬೆಂಗಳೂರು, ದಿ: 29–05–2018</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಾಲೇಜುಗಳಿಗೆ ವಿದ್ಯಾರ್ಥಿಗಳ ಮೂಲ ದಾಖಲಾತಿಗಳನ್ನು ಹಿಂದಿರುಗಿಸಲು ಮಾನ್ಯ ನ್ಯಾಯಾಲಯಗಳಿಂದ ನಿರ್ದಿಷ್ಟ ಆದೇಶಗಳಿರುವ ಪ್ರಕರಣಗಳಲ್ಲಿ ಗ್ರಾಮೀಣ ಸೇವಾ ಬಾಂಡ್‌ನಲ್ಲಿ ನಿಗದಿಪಡಿಸಿರುವಂತೆ ರೂ. 15.00 ರಿಂದ 30.00 ಲಕ್ಷಗಳನ್ನು ಹಾಗೂ 03 ವರ್ಷಗಳ ಬಾಂಡ್‌ನಲ್ಲಿ ನಿಗದಿಪಡಿಸಿರುವಂತೆ ರೂ. 50.00 ಲಕ್ಷಗಳನ್ನು ಪಡೆಯುವ ಬದಲಿಗೆ 2018–19 ನೇ ಸಾಲಿನ ಸ್ನಾತಕೋತ್ತರ ವೈದ್ಯಕೀಯ & ದಂತ ವೈದ್ಯಕೀಯ ಕೋರ್ಸಿಗೆ ಪ್ರವೇಶ ಪಡೆದು ಕೌನ್ಸಿಲಿಂಗ್ ಪ್ರಕ್ರಿಯೆ ಮುಗಿದ ನಂತರ ಹಂಚಿಕೆಯಾದ ಸೀಟುಗಳನ್ನು ಆದ್ಯರ್ಪಿಸಿ, ವ್ಯಾಸಂಗದ ಮಧ್ಯದಲ್ಲಿ ಬಿಟ್ಟು ಹೋದ ಎಲ್ಲಾ ಪ್ರಕರಣಗಳಲ್ಲಿ ವಿದ್ಯಾರ್ಥಿಗಳಿಗೆ The Karnataka Conduct of Entrance Test for Selection and Admission to Post Graduate Medical and Dental Degree and Diploma Courses Rules, 2006 ರ ನಿಯಮ 15 (2) ರಲ್ಲಿ ನಿಗದಿಪಡಿಸಿರುವ ರೂ. 5:00 ಲಕ್ಷ ಹಾಗೂ ಪಡೆದಿರುವ ಶಿಷ್ಯವೇತನದ ಜೊತೆಗೆ ಪ್ರತಿ ಬಂಧಪತ್ರ/ಮುಚ್ಚಳಿಕೆ ಮುರಿಯುವ ದರವಾಗಿ ರೂ. 5.00 ಲಕ್ಷಗಳನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
K. Murali 29/05/18

**(ಕೆ. ಮುರಳಿ)**
ಸರ್ಕಾರದ ಅಧೀನ ಕಾರ್ಯದರ್ಶಿ–2,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
(ವೈದ್ಯಕೀಯ ಶಿಕ್ಷಣ)

29.05.18

<u>ಇವರಿಗೆ:</u>

1) ಕಾರ್ಯಕಾರಿ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18 ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560032.
2) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು–560009.

3) ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು-560041.
4) ಸಂಬಂಧಪಟ್ಟ ಎಲ್ಲಾ ಕಾಲೇಜುಗಳಿಗೆ (ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮುಖಾಂತರ).
5) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ ಮಾಹಿತಿಗಾಗಿ:

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.